THE HINDU
Online Newspaper Clipping Service
Dtd-Friday, 11th, May- 2018
Page No. 02

# Colleges move High Court against seat sharing scheme in PG medical courses

## Question State govt.'s action of allotting seats

SPECIAL CORRESPONDENT
BENGALURU

The Karnataka High Court on Thursday ordered issue of notice to the State government on a petition filed by the Association of Minority Professional Colleges in Karnataka questioning the government's action of allotting seats to post-graduate medical courses contrary to the Post-Graduate Medical Education (Amendment) Regulations 2018.

A division bench comprising Justice Aravind Kumar and Justice Krishna S. Dixit, in its interim order, has said that the allotment of seats by the State government through the Karnataka Examinations Authority will be subject to the final outcome of the petition.



The Association, in its petition, has said that State government cannot fill up 75% of total seats as per the consensual agreement signed with the Association as the said agreement ceased following enactment of the regulations by the Medical Council of India with effect from April 5, 2018.

Till the amended regulations were notified, there was no statute or regulations by the MCI governing the seat sharing pattern between the private colleges and the State. The private college were compelled by the State to agree for 75-25 seat sharing ratio under the agreement by allowing private medical colleges to fill up 15% seats under the NRI quota and another 10% seats on higher fee structure category.

With the notification of regulation on seat sharing by the MCI providing 50-50 seat sharing ratio between the State government and the college managements based on the NEET ranking, the State government should have allotted candidates only for 50% of the seats during the first round of counselling held from April 18, the Association claimed. Pointing out that the government did not respond to the plea of the Association to adhere to the new regulations, it has been pointed in the petition that the second round of counselling has been deferred for now after the Association sent a communication to the authorities.

ವಿಜಯ ಕರ್ನಾಟಕ



## ವೈದ್ಯಕೀಯ ಸೀಟು ಹಂಚಿಕೆ ವಿವಾದ

# ಕೋರ್ಟ್ ತೀರ್ಪಿನ ವ್ಯಾಪ್ತಿಗೆ

**ವಿಕ ಸುದ್ದಿಲೋಕ** ಬೆಂಗಳೂರು

ವೈದ್ಯ ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರಕಾರ ಹೊಸದಾಗಿ ಹೊರಡಿಸಿರುವ ಸ್ನಾತಕೋತ್ತರ ವೈದ್ಯ ಶಿಕ್ಷಣ(ತಿದ್ದುಪಡಿ) ನಿಯಮ 2018ನ್ನು ಕಡ್ಡಾಯವಾಗಿ ಜಾರಿಗೊಳಿಸುವಂತೆ ಮತ್ತು ಆ ಪ್ರಕಾರ 2018-19ನೇ ಸಾಲಿನಲ್ಲಿ • ಶೇ.50ರಷ್ಟು ಸೀಟುಗಳನ್ನು ಬಿಟ್ಟುಕೊಡುವಂತೆ ನಿರ್ದೇಶನ ನೀಡಬೇಕೆಂದು ಅಲ್ಪ ಸಂಖ್ಯಾತ ವೈದ್ಯ ಕಾಲೇಜುಗಳು ಹೈಕೋರ್ಟ್ ಮೊರೆ ಹೋಗಿವೆ.



ಕರ್ನಾಟಕ ಅಲ್ಪ ಸಂಖ್ಯಾತ ವೃತ್ತಿಪರ ಕಾಲೇಜುಗಳ ಒಕ್ಕೂಟ ಮತ್ತಿತರರು ಸಲ್ಲಿಸಿದ್ದ ಅರ್ಜಿ ನ್ಯಾ.ಅರವಿಂದ್ ಕುಮಾರ್ ಮತ್ತು ನ್ಯಾ. ಕೃಷ್ಣ ದೀಕ್ಷಿತ್ ಅವರಿದ್ದ ವಿಶೇಷ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತು.

ಕೆಲ ಕಾಲ ವಾದ ಆಲಿಸಿದ ನ್ಯಾಯಪೀಠ, ಕೇಂದ್ರ, ರಾಜ್ಯ ಸರಕಾರ ಮತ್ತು ಪರೀಕ್ಷಾ ಪ್ರಾಧಿಕಾರಕ್ಕೆನೋಟಿಸ್ ಜಾರಿಗೊಳಿಸಿತಲ್ಲದೆ, ಸೀಟು ಹಂಚಿಕೆ ಕೋರ್ಟ್‌ನ ಅಂತಿಮ ತೀರ್ಪಿಗೆ ಒಳಪಡುತ್ತ ದೆಂದು ಮಧ್ಯಾಂತರ ಆದೇಶ ಹೊರಡಿಸಿತು.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಆರ್.ಸುಬ್ರಮಣ್ಯ ''2018ರಲ್ಲಿ ಕೇಂದ್ರ ಸರಕಾರ ಹೊಸದಾಗಿ ಹೊರಡಿಸಿರುವ ನಿಯಮದಂತೆ ರಾಜ್ಯ ಸರಕಾರ ಶೇ.50ರಷ್ಟು ಸೀಟುಗಳನ್ನು ಖಾಸಗಿ ವೈದ್ಯ ಕಾಲೇಜುಗಳಿಗೆ ಬಿಟ್ಟುಕೊಡಬೇಕು. ಇನ್ನುಳಿದ ಶೇ.50ರಷ್ಟು ಸೀಟುಗಳನ್ನು ನೀಟ್ ಪರೀಕ್ಷೆಯಲ್ಲಿ ಅರ್ಹತೆ ಗಿಟ್ಟಿಸಿದವರಿಗೆ ಕೆಇಎ ಮೂಲಕ ಸೀಟು ಹಂಚಿಕೆ ಮಾಡಬೇಕು.ಆದರೆ ರಾಜ್ಯ ಸರಕಾರ ಶೇ.25ರಷ್ಟು ಸೀಟುಗಳನ್ನು ಮಾತ್ರ ಖಾಸಗಿಯವರಿಗೆ ನೀಡುತ್ತಿದೆಬಿಬಿಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಸರಕಾರ, ಖಾಸಗಿ ವೈದ್ಯ ಕಾಲೇಜುಗಳ ಜೊತೆ ಪ್ರತಿವರ್ಷ ಸಹಮತದ ಒಪ್ಪಂದ ಮಾಡಿಕೊಳ್ಳುತ್ತಿದೆ. ಆದರಂತೆ ಅನಿವಾಸಿ ಭಾರತೀಯ ಕೋಟಾದಡಿ ಶೇ.15 ಮತ್ತು ಶೇ.10ರಷ್ಟು ಸೀಟುಗಳನ್ನು ಕಾಲೇಜುಗಳಿಗೆ ಭರ್ತಿ ಮಾಡಿಕೊಳ್ಳಲು ಅವಕಾಶ ನೀಡು ತ್ತದೆ. ಇನ್ನುಳಿದ ಶೇ.75ರಷ್ಟು ಸೀಟುಗಳನ್ನು ಸರಕಾರವೇ ಪಡೆದುಕೊಳ್ಳುತ್ತಿದೆ. ಸರಕಾರ ಭರ್ತಿ ಮಾಡುವ ಸೀಟುಗಳಿಗೆ ಕಡಿಮೆ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಅಂತಹ ವಿದ್ಯಾರ್ಥಿಗಳಿಂದ ಸಂಗ್ರಹವಾಗುವ ಹಣದಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಪೂರಕ ವಾದ ಮೂಲಸೌಕರ್ಯ ಕಲ್ಪಿಸುವುದು ಕಷ್ಟ ವಾಗುತ್ತದೆ,'' ಎಂದು ಅವರು ವಿವರಿಸಿದರು.

ಹಾಗಾಗಿ ಕೇಂದ್ರದ ಹೊಸ ನಿಯಮ ದಂತೆ ಶೇ.50ರಷ್ಟು ಸೀಟುಗಳನ್ನು ಖಾಸಗಿ ವೈದ್ಯ ಕಾಲೇಜುಗಳಿಗೆ ಬಿಟ್ಟಿಕೊಡುವಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿ ದಾರರು ನ್ಯಾಯಾಲಯವನ್ನು ಕೋರಿದ್ದಾರೆ.